# ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.

## ಎಸ್.ಸಿ. ನಂಃ 66/2021

**ಫಿರ್ಯಾದುದಾರರುಃ** **ಕರ್ನಾಟಕ ರಾಜ್ಯದ ಪರವಾಗಿ**
**(ಶಿಡ್ಲಘಟ್ಟ ನಗರ ಠಾಣೆ)**
**ವಿರುದ್ಧ**
**ಆರೋಪಿತರುಃ** **ಕಲಂದರ್ ಖಾನ್ ಮತ್ತು ಇತರರು**

| | | | |
|---|---|---|---|
| **ಸಾಕ್ಷಿದಾರರ ಹೆಸರುಃ** | ನವಾಜ್ ಪಾಷ | ಫ್ರಾಸಾಃ | 2 |
| **ತಂದೆಯ ಹೆಸರುಃ** | ಅಬ್ದುಲ್ ಗಪ್ಪರ್ ಸಾಬ್ | ಚಾಸಾಃ | 3 |
| **ವಯಸ್ಸುಃ** | 39 ವರ್ಷ | ಪ್ರಮಾಣ ವಚನ ಭೋದಿಸಿದ ದಿನಾಂಕ | 17.11.2023. |
| **ಉದ್ಯೋಗಃ** | ಚಾಲಕ | | |
| **ವಾಸ ಸ್ಥಳಃ** | ಸಂತೋಷ ನಗರ, ಶಿಡ್ಲಘಟ್ಟ ನಗರ | | |

## ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

ಮೃತ ಅಂಜದ್ ನವಾಜ್ ನನಗೆ ಗೊತ್ತು. ಅವರು ಈಗ ಜೀವಂತ ಇಲ್ಲ. ಮೃತನ ಕೊಲೆಯಾಗಿರುತ್ತದೆ. ದಿನಾಂಕಃ21.03.2020 ರಂದು ಶನಿವಾರ ಆತನ ಕೊಲೆ ಆಗಿರುತ್ತದೆ. 3 ವರ್ಷದ ಹಿಂದೆ ಕೊಲೆಯಾಗಿರುತ್ತದೆ.

2) ಆ ದಿನ ನಾನು ನಮಾಜ್ ಮಾಡಿಕೊಂಡು ಮಧ್ಯಾಹ್ನ 1.45 ಗಂಟೆ ಸಮಯದಲ್ಲಿ ಮನೆಗೆ ಹೋಗುತ್ತಿದ್ದಾಗ ಮೃತ ವ್ಯಕ್ತಿ ನನ್ನನ್ನು ಅವರ ಮನೆ ಹತ್ತಿರ ಕರೆದರು. ಗಾಡಿಯನ್ನು ತೆಗೆದಿಕೋ ನಾವು ಕಟ್ಟಡದ ಹತ್ತಿರ ಹೋಗೋಣ ಎಂದು ನನಗೆ ತಿಳಿಸಿದರು.

ನಾನು ದ್ವಿಚಕ್ರ ವಾಹನವನ್ನು ತೆಗೆದುಕೊಂಡು ಮೃತ ವ್ಯಕ್ತಿ ಜೊತೆ ಕೋಟೆ ಸರ್ಕಲ್, ಮದೀನ ಮಸೀದಿ ಎದುರುಗಡೆ, ಶಿಡ್ಲಘಟ್ಟಕ್ಕೆ ಹೋದೆವು. ಅಲ್ಲಿ ಕೆಲಸ ನೋಡಿಕೊಂಡು ವಾಪಸ್ಸು ಮಧ್ಯಾಹ್ನ 2.30 ಗಂಟೆಗೆ ನಾನು ಮತ್ತು ಮೃತ ಅಂಜಾದ್ ಬರುತ್ತಿದ್ದಾಗ ಅಂಡರ್ ಪಾಸ್ ಬಿಟ್ಟು ಬರುವಾಗ ಒಂದು ಕಾರು ಹಿಂದುಗಡೆಯಿಂದ ಬಂದು ನಮಗೆ ಡಿಕ್ಕಿ ಹೊಡೆದರು. ನಾನು ಮತ್ತು ಮೃತ ವ್ಯಕ್ತಿ ಬಿದ್ದು ಹೋದೆವು. ಕಾರಿನಲ್ಲಿ 4 ಜನ ಬಂದು ಕೊಲೆ ಮಾಡಿದರು.

3) ಈ ಹಂತದಲ್ಲಿ ವಿಶೇಷ ಸರ್ಕಾರಿ ಅಭಿಯೋಜಕರು ಕೊಲೆಯನ್ನು ಹೇಗೆ ಮಾಡಿದರು ಎಂದು ಪ್ರಶ್ನಿಸಿದ್ದು, ಅದಕ್ಕೆ ಆರೋಪಿತರ ಪರ ವಕೀಲರು ತಕರಾರನ್ನು ತೆಗೆದಿದ್ದು, ಸದರಿ ತಕರಾರನ್ನು ತಳ್ಳಿ ಹಾಕಿ ಸಾಕ್ಷಿ ಗೆ ಉತ್ತರ ಹೇಳಲು ನ್ಯಾಯಾಲಯವು ಅವಕಾಶ ಮಾಡಿಕೊಡಲಾಯಿತು.

4) 4 ಜನ ಆರೋಪಿಗಳು ಮಚ್ಚು, ಲಾಂಗ್ ನಿಂದ ಮೃತ ವ್ಯಕ್ತಿಯನ್ನು ಹೊಡೆದು ಹಾಕಿದರು. ನಂತರ ಅವರು ಕಾರು ತೆಗೆದುಕೊಂಡು ಹೋದರು. ಸರ್ಕಾರಿ ವಿಶೇಷ ಅಭಿಯೋಜಕರು ಆರೋಪಿ ಹೆಸರುಗಳು ಹೇಳಲಾಗುತ್ತದೆ ಮತ್ತು ಅವರನ್ನು ತೋರಿಸಿದರೆ ಗುರುತಿಸಲು ಆಗುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಅವರ ಹೆಸರುಗಳೆಂದರೆ ಈ ಹಂತದಲ್ಲಿ ಸಾಕ್ಷಿಯು ಮೌನವಾಗಿ ನಿಂತಿರುತ್ತಾರೆ.

5) ಅಲ್ಲಿಂದ ಆಸ್ಪತ್ರೆಗೆ ಕರೆದುಕೊಂಡು ಹೋದರು. ನಾನು ಆಸ್ಪತ್ರೆಗೆ

ಕರೆದುಕೊಂಡು ಹೋಗಲಿಲ್ಲ. ಸಾಕ್ಷಿಗೆ ವಿ.ಸಿ. ಮುಖಾಂತರ ಕಾಣಿಸುತ್ತಿರುವ ಆರೋಪಿಗಳನ್ನು ಮತ್ತು ನ್ಯಾಯಾಲಯದ ಮುಂದೆ ಇರುವ ಆರೋಪಿಗಳನ್ನು ಗುರುತು ಮಾಡಲು ಕೇಳಿದಾಗ ಸಾಕ್ಷಿಯು ಮೌನವಾಗಿ ನಿಂತಿರುತ್ತಾರೆ. ಸಾಕ್ಷಿಯು ಮುಂದುವರೆದು ಆರೋಪಿಗಳನ್ನು ನನಗೆ ಗುರುತಿಸಲು ಸಾಧ್ಯವಿಲ್ಲವೆಂದು ಹೇಳುತ್ತಾರೆ.

6) ನಾನು ಸಂಜೆ 5.00 ಗಂಟೆಗೆ ಶಿಡ್ಲಘಟ್ಟ ಸರ್ಕಾರಿ ಆಸ್ಪತ್ರೆಯ ಹತ್ತಿರ ಹೋಗಿದ್ದನು. ಅಲ್ಲಿ ಪೋಲಿಸರು ನನ್ನನ್ನು ವಿಚಾರಣೆ ಮಾಡಿದರು. ನಾನು ಪೋಲಿಸರಿಗೆ ಆ ಬಗ್ಗೆ ಹೇಳಿಕೆ ನೀಡಿರುತ್ತೇನೆ. ಪೋಲಿಸರು ನನ್ನನ್ನು 2 ಸಲ ವಿಚಾರಣೆ ಮಾಡಿರುತ್ತಾರೆ. ಘಟನೆ ಬಗ್ಗೆ ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ.

(ಈ ಹಂತದಲ್ಲಿ ವಿಶೇಷ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರು ಅಭಿಯೋಜಕರ ಪರವಾಗಿ ಸಾಕ್ಷ್ಯ ನುಡಿಯದಿದ್ದ ಕಾರಣ ಈ ಹಂತದಲ್ಲಿ ಅಭಿಯೋಜಕರು ಮುಂದಿನ ಸಾಕ್ಷ್ಯ ವಿಚಾರಣೆಗಾಗಿ ಸಮಯ ಕೋರಿರುತ್ತಾರೆ. ಸಮಯವಕಾಶ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು) ಓ.ಹೇ.ಕೇ. ಸರಿ ಇದೆ.

ದಿಃ17.11.2023
ಸ್ಥಳಃ ಚಿಂತಾಮಣಿ

**(ನಾಗವೇಣಿ)**
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.